ದೊರೆತಿದೆ. ಹೀಗೆ ವಯೊಲಿನ್ ನನಗೆ ಸಾಧಕ ವ್ಯಕ್ತಿಗಳ ಸಂಪರ್ಕವನ್ನು, ಪ್ರೇರಣೆಯನ್ನೂ ಕೊಟ್ಟಿದೆ.

ಬಾಲಮುರಳೀಕೃಷ್ಣ ಅವರಂತೂ ಸಂಗೀತ ಸಾಗರದಲ್ಲಿ ಮನಸೋ ಇಚ್ಛೆ ವಿಹರಿಸಬಲ್ಲವರು. ಅವರಿಗೆ ಸಾಥ್ ನೀಡುವುದು ಸವಾಲೂ ಹೌದು, ಅವರ ಮನೋಗತವನ್ನು ತಿಳಿದು ನುಡಿಸುವುದು ಅತ್ಯಂತ ಸಂತೋಷದ ವಿಷಯವೂ ಹೌದು. ಅವರೂ ಸಹ ಕಲಾವಿದರನ್ನು ಪ್ರೋತ್ಸಾಹಿಸುತ್ತ ಮುನ್ನಡೆಯುವವರು. ಅದೇನೇ ಇದ್ದರೂ ವಯೊಲಿನ್ ಕಲಿಕೆಯ ಹಾದಿ ಇಂತಿಷ್ಟೇ ಎಂದು ಸೀಮಿತವಾದುದಲ್ಲ. ರಾಗಗಳ ಅನ್ವೇಷಣೆ, ಹೊಸ ಶ್ರೋತೃಗಳ ಮನೋಧರ್ಮವನ್ನು ಅರ್ಥ ಮಾಡಿಕೊಳ್ಳುವುದು... ಹೀಗೆ ನಿರಂತರ ಕಲಿಕೆಯು ಪ್ರತಿಯೊಬ್ಬನಿಗೂ ಅಗತ್ಯ. ಸಂಗೀತವಾಗಲೀ, ವಾದ್ಯಗಳನ್ನಾಗಲೀ ಕಲಿತ ಎಲ್ಲರೂ ಸಂಗೀತಗಾರರಾಗಿಯೇ ಮುಂದುವರೆಯುತ್ತಾರೆ ಎಂದೇನಿಲ್ಲ. ಅಂಥ ಹಟವೂ ಸಾಧುವಾದುದಲ್ಲ. ಸಂಗೀತ ಪರಂಪರೆಯು, ರಸಿಕರು, ಕಲಾ ವಿಮರ್ಶಕರು, ಪೋಷಕರು ಮತ್ತು ಸಂಗೀತಗಾರರ ಸಮನ್ವಯತೆಯೊಂದಿಗೆ ಮುಂದುವರಿಯುವಂತಹುದು.



**◆ ನಿಮ್ಮ ಮತ್ತು ವಯೊಲಿನ್‌ನ ಮೊದಲ ಭೇಟಿಯ ಬಗ್ಗೆ ತಿಳಿಸಿಕೊಡಿ.**

ನಾನು ಚಿಕ್ಕವನಾಗಿದ್ದಾಗ ನನ್ನ ಅಜ್ಜ ನನಗೆ ಮೊದಲು ವಯೊಲಿನ್ ಕೊಟ್ಟರು. ನಾನು ಅದನ್ನು ಈಗಲೂ ಜೋಪಾನ ಮಾಡಿ ಇಟ್ಟುಕೊಂಡಿದ್ದೇನೆ. ವಯೊಲಿನ್ ಎಂದರೆ ನನಗೆ ಮಗುವಿದ್ದಂತೆ. ನಾನದನ್ನು ಸೂಟ್‌ಕೇಸ್‌ನಂತೆ ಹಿಡಿದು ಬೀಸುತ್ತ ನಡೆಯಲಾರೆ. ನನ್ನಪುಟ್ಟ ಮಗುವನ್ನು ಎತ್ತಿಕೊಂಡಂತೆ ಎದೆಗೆ ಅವಚಿ ಹಿಡಿದುಕೊಂಡು ನಡೆಯುತ್ತೇನೆ. ನನಗೆ ಬೇಸರವಾದರೆ ವಯೊಲಿನ್ ಜೊತೆಗೆ ಸುಮ್ಮನೇ ಕೂರುತ್ತೇನೆ. ಅದನ್ನು ಸ್ವಚ್ಛಮಾಡುವ ಅಥವಾ ಅದನ್ನಿರಿಸುವ ಜಾಗವನ್ನು ಮತ್ತಷ್ಟು ಚಂದ ಮಾಡುವ ಕೆಲಸದಲ್ಲಿ ತೊಡಗುತ್ತೇನೆ. ನಾನು ಯಾವುದೇ ಊರಿಗೆ, ನಗರಕ್ಕೆ ಅಥವಾ ದೇಶಕ್ಕೆ ಹೋಗಲಿ. ಅಲ್ಲಿ ವಯೊಲಿನ್ ಅಂಗಡಿಯಿದೆಯೇ ಎಂದು ಹುಡುಕುತ್ತೇನೆ. ಅಂಗಡಿಗೆ ಭೇಟಿ ನೀಡಿ ಅಲ್ಲಿರುವ ಹೊಸ ವಯೊಲಿನ್‌ಗಳನ್ನೆಲ್ಲ ನೋಡುತ್ತೇನೆ. ನುಡಿಸಲು ಅವಕಾಶವಿದ್ದರೆ ತುಸು ಹೊತ್ತು ನುಡಿಸಿ ನೋಡುತ್ತೇನೆ.

ಇದೊಂದು ಅದ್ಭುತವಾದ ವಾದ್ಯ. ಬ್ರಿಟಿಷರ ಕಾಲದಲ್ಲಿ ಭಾರತವನ್ನು ಪ್ರವೇಶಿಸಿದ್ದು ಇಂದು ನಮ್ಮ ಸಂಗೀತ ಲೋಕದ ಒಂದು ಅಂಗವೇ ಆಗಿದೆ. ಮುತ್ತುಸ್ವಾಮಿ ದೀಕ್ಷಿತರ ತಮ್ಮ ಬಾಲುಸ್ವಾಮಿ ದೀಕ್ಷಿತರು ಈ ವಾದ್ಯವನ್ನು ನಮ್ಮ ಸಂಗೀತಕ್ಕೆ ಒಗ್ಗುವಂತೆ ಹೊಂದಿಸಿ, ಪರಿಚಯಿಸಿದರು. ದಕ್ಷಿಣ ಭಾರತದಲ್ಲಿ ಸಂಗೀತವು ಸಾಹಿತ್ಯ ಪ್ರಧಾನವಾಗಿದೆ. ಈ ವಯೊಲಿನ್‌ನ ಧ್ವನಿಯಲ್ಲಿ ಸಾಹಿತ್ಯವು ಸ್ಪಷ್ಟವಾಗುವಂತೆ ನುಡಿಸುವ ಸಾಧ್ಯತೆಯಿರುವುದರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಇದು ಚೆನ್ನಾಗಿ ಒಗ್ಗಿಕೊಂಡಿದೆ. ನನ್ನ ಗುರುಗಳಾದ ಲಾಲ್‌ಗುಡಿ ಜಿ. ಜಯರಾಮನ್ ಅವರು ಈ ಕಲೆಯನ್ನು ಒಲಿಸಿಕೊಂಡಿದ್ದರು. ಭಾರತದ ಇತರ ತಂತಿ-ತಾಳವಾದ್ಯಗಳ ಜೊತೆಗೂ ಇದು ಸುಲಲಿತವಾಗಿ ಹೊಂದಿಕೊಂಡು ಸಂಗೀತದ ಒಟ್ಟಂದವನ್ನು ಹೆಚ್ಚಿಸುತ್ತದೆ. ಕಛೇರಿಯ ವರ್ಚಸ್ಸಿಗೆ ಪೂರಕವಾಗಿ ನಿಲ್ಲುತ್ತದೆ.

**◆ ನಿಮ್ಮ ಪ್ರಸಿದ್ಧಿ, ಸಾಧನೆಯ ಹೊರತಾಗಿಯೂ ನೀವು ವಿದ್ಯಾರ್ಥಿಗಳ ಮೊದಲ ಕಛೇರಿಗೆ ಅಂದರೆ ಆರಂಗೇಟ್ರಂಗೆ ವಯೊಲಿನ್ ನುಡಿಸುವ ಉತ್ಸಾಹೀ ಕಲಾವಿದ ಎಂದು ಪ್ರಸಿದ್ಧರಾದವರು.**

ಹೊಸಕಲಾವಿದರೆಂದರೆ ಈ ಪರಂಪರೆಯನ್ನು ಮುನ್ನಡೆಸುವ ಚಿಗುರುಗಳಿದ್ದಂತೆ. ಅವರನ್ನು ಪೋಷಿಸುವುದು ಹಿರಿಯರ ಕರ್ತವ್ಯ. ನನ್ನ ಮಗನೋ ಮೊಮ್ಮಗನೋ, ಮೊಮ್ಮಗಳೋ ಮೊದಲ ಬಾರಿಗೆ ಕಛೇರಿ ಮಾಡುತ್ತಾರೆಂದರೆ ನಾನು ಎಷ್ಟು ಸಂಭ್ರಮದಿಂದ ಪ್ರೀತಿಯಿಂದ ಅವರ

